# ಖಾನ್-ಕಿತ್ತಾಟ



‘ಬಾಡಿಗಾರ್ಡ್’ ಬಿಡುಗಡೆಗೆ ರೆಡಿಯಾಗಿದೆ. ಈ ಸುದ್ದಿ ಓದುವ ಹೊತ್ತಿಗೆ ಥಿಯೇಟರ್‌ನಲ್ಲಿ ಜನಸಂದಣಿ ಸೇರಿರುತ್ತದೆ. ಸುದ್ದಿ ಅದಲ್ಲ– ಬಾಡಿಗಾರ್ಡ್ ಚಿತ್ರದ ಜತೆಗೆ ಶಾರೂಕ್ ಖಾನ್‌ನ ‘ಡಾನ್–2’ ಚಿತ್ರದ ಟ್ರೈಲರ್ ತೋರಿಸೋದಕ್ಕೆ ಸಲ್ಮಾನ್ ಖಾನ್ ಗುರ್‍ರ್.. ಎಂದಿದ್ದಾನೆ!

ಸಲ್ಮಾನ್ ಖಾನ್‌ನ ‘ಬಾಡಿಗಾರ್ಡ್’ ಮತ್ತು ಶಾರೂಕ್ ಖಾನ್‌ನ ‘ಡಾನ್–2’ ಎರಡಕ್ಕೂ ರಿಲಯನ್ಸ್ ಎಂಟರ್‌ಟೈನ್‌ಮೆಂಟ್‌ನ ಪ್ರಚಾರ ಸಾರಥ್ಯ. ಹಾಗಾಗಿ ಬಾಡಿಗಾರ್ಡ್ ಚಿತ್ರದ ಜತೆಗೆ ಡಾನ್–2 ಪ್ರಚಾರ ನಡೆಸುವುದಕ್ಕೆ ಕಾನೂನುಪ್ರಕಾರ ಅಡ್ಡಿಯೇನೂ ಇಲ್ಲ. ಆದರೆ ಸಲ್ಲೂ ಮಿಯಾ ಬಿಲ್ ಕುಲ್ ಅದಕ್ಕೆ ಒಪ್ಪಿಲ್ಲ. ‘ನನ್ನ ಚಿತ್ರದ ಹೆಸರಲ್ಲಿ ಶಾರೂಕ್ ಚಿತ್ರದ ಪ್ರಚಾರ ಮಾಡುವುದು ಸರಿಯಲ್ಲ. ಬೇಕಿದ್ದರೆ ಕರಣ್ ಜೋಹರ್‌ನ ‘ಅಗ್ನಿಪಥ್’ ಚಿತ್ರದ ಟ್ರೈಲರ್ ತೋರಿಸಿ’ ಎಂದು ಸಲ್ಲೂ ಸಲಹೆ ನೀಡಿದ್ದಾನಂತೆ. ‘ಅಗ್ನಿಪಥ್’ನಲ್ಲಿ ಹೃತಿಕ್ ರೋಶನ್ ಮತ್ತು ಸಂಜಯ್‌ದತ್ ಜೋಡಿ ನಟಿಸಿದೆ. ಹೃತಿಕ್ ಜತೆಗೆ ಸಲ್ಲೂಗೆ ಅಂತಹ ಸ್ನೇಹ ಏನೂ ಇಲ್ಲವಾದರೂ ಹೃತಿಕ್ ಚಿತ್ರದ ಪ್ರಚಾರಕ್ಕೆ ಅಡ್ಡಿ ಇಲ್ಲವಂತೆ!

ಅದ್ಯಾಕೋ ಶಾರೂಕ್ ಬಗ್ಗೆ ಉಳಿದ ಇಬ್ಬರು ಖಾನ್‌ಗಳೂ ಸದಾ ಕಿಡಿ ಕಾರುತ್ತಿದ್ದಾರೆ. ಇತ್ತೀಚೆಗೆ ಷೋ ಒಂದರಲ್ಲಿ ಭಾಗವಹಿಸಲು ಅಮೀರ್‌ಖಾನ್ ನಿರಾಕರಿಸಿದ್ದ. ಅದಕ್ಕೆ ಕಾರಣ ಆ ಷೋ ಏರ್ಪಡಿಸಿದ ಕಂಪೆನಿ ಶಾರೂಕ್‌ನದ್ದು!

ಮೂರು ವರ್ಷಗಳ ಹಿಂದೆ ಕತ್ರೀನಾ ಕೈಫ್ ಬರ್ತ್‌ಡೇ ಪಾರ್ಟಿಯಲ್ಲಿ ಸಲ್ಮಾನ್ ಖಾನ್ ಮತ್ತು ಶಾರೂಕ್ ನಡುವೆ ಜಟಾಪಟಿಯಾಗಿತ್ತು. ಆ ಬಳಿಕ ಇಬ್ಬರೂ ಪರಸ್ಪರ ಹಸ್ತಲಾಘವ ಮಾಡಿಲ್ಲವಂತೆ. ಬಾಲಿವುಡ್ ಈ ಇಬ್ಬರೂ ಖಾನ್‌ಗಳ ಹಿಂದೆ ಇಬ್ಭಾಗವಾಗಿ ಬೆಂಬಲಕ್ಕೆ ನಿಂತಿದ್ದು, ಕೋಳಿಜಗಳಕ್ಕೆ ರಂಗೇರಿದೆ!

■ ಬಿಂದು

